## ಇಲ್ಲಿಯವರೆಗೆ



ಕಾಳಿಂಗನ ಸಂಸಾರ ಬೆಳೆಯುತ್ತಿದ್ದಂತೆ, ಸ್ವರ್ಗವೇ ಇಲ್ಲಿದೆ ಎನ್ನುವಷ್ಟು ಸಂತೋಷ ಅವನ ಮನೆಯ ಪರಿಸರದಲ್ಲಿ ಸುಳಿದಾಡುತ್ತಿತ್ತು. ಮನೆ ತುಂಬ ಸಂತೋಷದ ಮಾತುಗಳು. ಕೊಟ್ಟಿಗೆಯ ತುಂಬ ದನಕರುಗಳು. ಕೃಷಿಭೂಮಿಯಲ್ಲಿ ಕಣ್ಣರಳಿಸುವಂತೆ ಮಾಡುತ್ತಿದ್ದ ಫಸಲು. ಈ ಸಂತಸವನ್ನು ಕದಡುವಂತೆ ಕಾಣಿಸಿಕೊಂಡಿದ್ದು ಹುಲಿಯ ನೆರಳು. ಒಮ್ಮೆಗೇ ಕೊಟ್ಟಿಗೆಯಲ್ಲಿ ಹಾಹಾಕಾರ ಕಾಣಿಸಿಕೊಂಡಿತು. ಆತಂಕದ ಛಾಯೆ ಮನೆಯೊಳಗೂ ಕಾಣಿಸಿಕೊಂಡಿತು. ಶಬ್ದವನ್ನೇನೋ ಮಾಡಬಹುದು, ಆದರೆ ವ್ಯಾಘ್ರಕ್ಕೆ ಎದುರಾಗಿ ನಿಲ್ಲುವುದು ಸಾಧ್ಯವೆ? ಈ ದ್ವಂದ್ವದಲ್ಲಿ ಮುಳುಗಿರುವಾಗಲೇ ಪುಣ್ಯಕೋಟಿ ಪ್ರಸಂಗ ನಡೆಯಿತು. ಅದರ ಪರಿಣಾಮವಾಗಿಯೇ ಕನ್ನಡಿಗರಿಗೆ ಸತ್ಯದ ರೂಪಕದಂತೆ ದಕ್ಕಿದ್ದು, ‘ಗೋವಿನಹಾಡು’. ಆ ಹಾಡುಕಥನದ ನಿಜವಾದ ಹೂರಣವನ್ನು ಕಣ್ಣಾರೆ ಕಂಡ ಮಹಾವೃಕ್ಷ, ‘ಗಂಧದನಾಡು’ ಎಂದು ಹೆಸರಾದ ನಾಡಿನೊಳಗೆ ನಡೆಯುತ್ತಿದ್ದ ಅನಾಚಾರಗಳನ್ನೂ ಕಣ್ಣಾರೆ ಕಾಣಬೇಕಾಯಿತು. ಕಣ್ಣೆದುರೇ ಕಾಡು ಸೂರೆಗೊಳ್ಳತೊಡಗಿತು. ಅರಣ್ಯರಕ್ಷಕರ ಜೀವಕ್ಕೆ ಕಿಮ್ಮತ್ತಿಲ್ಲದಂತಾಯಿತು.

ಇನ್ನೂ ಬೆಳಕು ಹರಿಯುವುದಕ್ಕಿಂತ ಮುಂಚೆಯೇ ಅಲ್ಲಿ ಹೋಗಿ ತಮ್ಮ ಕ್ರಿಯೆಯನ್ನು ಮುಗಿಸಿಕೊಂಡು ಬರಬೇಕಿತ್ತು. ನಂತರದ ಸರದಿ ಗಂಡಸರದು. ಆಗೆಲ್ಲ ಕಾಡು ಈಗಿನಷ್ಟು ಬಯಲಾಗಿರಲಿಲ್ಲ. ಪೆಳೆಗಳ ಸಂಧಿಯಲ್ಲಿ ಚಿರತೆಯೋ, ಕರಡಿಯೋ ಅಡಗಿ ಕುಳಿತಿದ್ದು ಅಥವಾ ತನ್ನ ಆಹಾರವನ್ನು ಹುಡುಕಿಕೊಂಡು ಬಂದಿರಬಹುದಾದ ಯಾವುದೋ ಕಾಡುಪ್ರಾಣಿ ಆಕ್ರಮಣ ಮಾಡಿಬಿಡಬಹುದೆಂದು ಹೆದರಿ ಎರಡುಮೂರುನಾಲ್ಕುಐದು ಜನ ಒಟ್ಟೊಟ್ಟಿಗೇ ಹೋಗಿ ಒಟ್ಟೊಟ್ಟಿಗೇ ಅಕ್ಕಪಕ್ಕದಲ್ಲಿ ಕುಳಿತು ತಿಣುಕಿ ತೀಡಿ ಎಲ್ಲವನ್ನೂ ಹೊರಹಾಕಿ ಬರುತ್ತಿದ್ದರು. ಏಕೆಂದರೆ ಮಾರನೇ ದಿನ ಇದೇ ವೇಳೆಯವರೆಗೆ ಮತ್ತೆ ಇಲ್ಲಿಗೆ ಬರುವಂತಿರಲಿಲ್ಲವಲ್ಲ. ಮತ್ತೆ ಮಾಡಬೇಕಾಗಿ ಬಂದರೂ ಎಲ್ಲೋ ಗದ್ದೆಕಡೆಗೋ ಕೆರೆ ಕಡೆಗೋ ಹೋದಾಗ ಅಪ್ಪಿತಪ್ಪಿ ಮಾಡಬಹುದಿತ್ತಷ್ಟೇ. ಆದರೆ ಅದೆಲ್ಲ ಎಷ್ಟು ಜನ ಹೆಂಗಸರಿಗೆ ಸಾಧ್ಯ? ಸಾಯಂಕಾಲ ಕೂಡ ಅಷ್ಟೇ. ಕತ್ತಲಾಗುವುದರೊಳಗಾಗಿ ಮೂತ್ರ ವಿಸರ್ಜಿಸಿ ಒಳಸೇರಿಕೊಂಡುಬಿಡಬೇಕಿತ್ತು. ಈಗಿನಂತೆ ಮನೆಯೊಳಗಡೆಯೇ ಎಷ್ಟೊತ್ತಿಗೆ ಬೇಕೆಂದರೆ ಅಷ್ಟೊತ್ತಿಗೆ ಹೋಗುವಂಥ ಸೌಲಭ್ಯ ಇರಲಿಲ್ಲ. ಕತ್ತಲಾದ ಮೇಲೆ ಆಚೆ ಹೋದರೆ ಯಾವುದಾದರೂ ಬೇಟೆಯಾಡುವ ಪ್ರಾಣಿ ಎಳೆದೊಯ್ದರೆ ಎಂಬ ಭಯವೂ ಇರುತ್ತಿತ್ತು. ಅಂಥ ಎಷ್ಟೋ ಘಟನೆಗಳು ನಡೆದೂ ಇದ್ದವು. ಬರೀ ಚಿರತೆಗಳಷ್ಟೇ ಅಲ್ಲ, ಎಷ್ಟೋ ಸಲ ಹುಲಿಗಳೂ ಸಹ ಬಂದು ಒಳ್ಳೊಳ್ಳೆ ವಯಸ್ಸಿಗೆ ಬಂದ ಹುಡುಗಹುಡುಗಿಯರನ್ನೇ ಅಪಹರಿಸಿಕೊಂಡು ಹೋದದ್ದಿದೆ. ಪಾಪ ಅವರ ಕಿರುಚಾಟದ ಸದ್ದೋ, ಬಟ್ಟೆ ಬರೆಯೋ, ರಕ್ತದ ಕಲೆಯೋ, ಅಳಿದುಳಿದ ಕೂದಲೋ ಮೂಳೆಗಳೋ ಸಿಕ್ಕರೆ ಮಾತ್ರ ತಿಳಿಯುತ್ತಿತ್ತು. ಸಿಗದೇ ಇದ್ದರೆ ಯಾವನ ಜೊತೆಗೋ ಯಾವಳ ಜೊತೆಗೋ ಕದ್ದು ಓಡಿಹೋಗಿದ್ದಾರೆ ಎಂದು ಅಪಪ್ರಚಾರ ಮಾಡಿ ಅವರ ಶೀಲವನ್ನೇ ಶಂಕಿಸಿ ಕಳಂಕಿತರನ್ನಾಗಿಸಿಬಿಡುತ್ತಿದ್ದರು ಪಾಪ.

ಗುರುಪಾದಪ್ಪನ ಬಗ್ಗೆ ಮಾತಾಡುತ್ತಿದ್ದೆನಲ್ಲ... ಆತ ರೋಗಿಗಳಿಗೆ ಮಲವಿಸರ್ಜಿಸಿ ಬಂದಿದ್ದ ತಿಪ್ಪೆಯನ್ನು ತೋರಿಸು ಬಾ ಎಂದು ಕರೆದೊಯ್ಯುತ್ತಿದ್ದ. ಹುಡುಗಿಯರಾದರೆ ತಾವೇ ತಿರುಗಿ ನೋಡದ ಅದನ್ನು ಹಿಂದಿರುಗಿ ಹೋಗಿ ತೋರಿಸಲು ನಾಚಿಕೊಳ್ಳುತ್ತಿದ್ದರು. ಆದರೆ ಕಾಯಿಲೆ ವಾಸಿಯಾಗಬೇಕಲ್ಲ. ಮಂಡಿಯ ಮೇಲಕ್ಕೆ ಸೀರೆಯನ್ನು ಎತ್ತಿಕೊಂಡು ಮೂಗನ್ನು ಮುಚ್ಚಿಕೊಂಡು ವಾರಗಟ್ಟಲೆಯಿಂದ ಕೊಳೆಯದೇ ಉಳಿದಿರುವ ಚಕ್ಕಳಗೊಂಡ ಮಲದಿಂದ ಹಿಡಿದು, ಎರಡು ಮೂರು ದಿನದ ಹುಳ ಹತ್ತಿಕೊಂಡು ಕರಗಿಹೋಗುತ್ತಿರುವ ಮಲವನ್ನು ನೋಡಿಕೊಂಡು ಹೆಜ್ಜೆಯನ್ನು ಎತ್ತಿಎತ್ತಿ ಇಡುತ್ತ ಅವತ್ತಿನ ಬೆಳಗಿನ ಇಬ್ಬನಿಯಲ್ಲೂ ಬಿಸಿಬಿಸಿ ಹಬೆಯಾಡುತ್ತಿರುವ ಗುಪ್ಪೆಗಳನ್ನು ದಾಟಿಕೊಂಡು ಇದೇ ತನ್ನದು ಎಂದು ತೋರಿಸುವ ಹೊತ್ತಿಗೆ ಆಕೆಯಾದರೆ ತನ್ನ ಸೀರೆಯ ಸೆರಗಿನಿಂದ ಮುಖವನ್ನೆಲ್ಲ ಮುಚ್ಚಿಕೊಂಡು ಬಿಟ್ಟಿರುತ್ತಿದ್ದಳು. ಅವ್ರೋ ತರಾವರಿ ಬಣ್ಣದ ಲೋಹದ ಅದಿರುಗಳನ್ನು ಗುಡ್ಡೆಹಾಕಿ ಜೋಡಿಸಿದಂತಿರುತ್ತಿದ್ದವು. ಅನ್ನವನ್ನು ತಿನ್ನುವ ಶ್ರೀಮಂತರ ಮನೆಯವರದಾದರೆ ಬಂಗಾರದ ಗಟ್ಟಿಯಂತೆಯೂ, ರಾಗಿಮುದ್ದೆ ತಿನ್ನುವವರದಾದರೆ ಕಬ್ಬಿಣದ ಅದಿರಿನಂತೆಯೂ, ನವಣೆ ತಿಂದವವರದಾಗಿದ್ದರೆ ಬೆಳ್ಳಿಯ ಗಟ್ಟಿಯಂತೆಯೂ, ಸಜ್ಜೆ ರೊಟ್ಟಿಯೋ ಮುದ್ದೆಯೋ ತಿಂದಿದ್ದವರದಾಗಿದ್ದರೆ ಒಳ್ಳೆ ತಾಮ್ರದಂತೆಯೂ ವಿವಿಧ ಬಣ್ಣ ಆಕಾರಗಳಲ್ಲಿ ಕಂಗೊಳಿಸುತ್ತಿದ್ದವು.

ಅಂಥ ತರಹೇವಾರಿ ಲೋಹದ ಗಟ್ಟಿಗಳನ್ನು ದಾಟಿಕೊಂಡು ಹೋಗಿ ಆಕೆಯೋ ಆತನೋ ತೋರಿಸುವ ಗಟ್ಟಿಯನ್ನು ಹತ್ತಿರದಲ್ಲೇ ಸಿಕ್ಕ ಕಡ್ಡಿಯೊಂದರಿಂದ ಕೆದಕೀ ಕೆದಕಿ ಅದರೊಳಗಿರಬಹುದಾದ ಗಂಧಕಾದಿಯಾಗಿ ಪೊಟ್ಯಾಷಿಯಂ, ಮೆಗ್ನೀಷಿಯಂಗಳನ್ನೆಲ್ಲ ತನ್ನ ಕೆಲೆಡೋಸ್ಕೋಪಿನಂಥ ಕಣ್ಣಿನಿಂದ ಸ್ಕ್ಯಾನ್ ಮಾಡಿ, ಮೂಗಿನಿಂದ ವಾಸನಾದಿಗಳನ್ನು ಆಘ್ರಾಣಿಸಿ ಮನಸ್ಸಿನೊಳಗೇ ರಿಪೋರ್ಟ್ ರೆಡಿಮಾಡಿಕೊಂಡು ವಾಪಸ್ಸು ಬರುತ್ತಿದ್ದ. ಆಗಿನ ಆತನ ಮೌನವನ್ನು ಗ್ರಹಿಸಲಾರದೇ ಆ ರೋಗಿಗಳಾದವರಾದರೂ ತಮಗೆ ಅದ್ಯಾವ ದೊಡ್ಡರೋಗ ಬಂದಿದೆಯೋ, ಆತ ಆದ್ಯಾವ ರಹಸ್ಯವನ್ನು ಸ್ಫೋಟಿಸಿಬಿಡುವನೋ ಎಂಬ ಅಳುಕಿನಿಂದ ತಳಮಳಿಸುತ್ತಿರುತ್ತಿದ್ದರು.

ಒಂದು ಸಲ ಹೀಗೇ ಪರಿಶೀಲನೆಗೆ ಒಳಪಡಿಸಿದಾಗ ಗೌರಮ್ಮನೆಂಬುವವಳಿಗೆ ಕಂಡುಬಂದ ಕಾಯಿಲೆಯೆಂದರೆ ಸ್ತನಕ್ಯಾನ್ಸರ್ ಆಗಿತ್ತು. ಆಕೆಗೆ ಹಾಗೆಂದರೇನೆಂದೇ ಗೊತ್ತಿರಲಿಲ್ಲ. ಆದರೆ ಹಾಗಂತ ಅದನ್ನು ಪರಪುರುಷನಿಗೆ ತೋರಿಸಲೂ ನಾಚಿಕೆ. ಏನು ಮಾಡಬೇಕು. ಗುರುಪಾದಪ್ಪ ಆಕೆಯ ಗಂಡನನ್ನು ಕರೆದು ವಿಚಾರಿಸಿದ. ಮನೆಯೊಳಗೆ ಇರುವ ಹತ್ತಾರು ಜನರೊಂದಿಗೇ ಮಲಗುವಂಥ ಪರಿಸ್ಥಿತಿ ಇರುವುದರಿಂದ ತಾನೆಂದೂ ಆಕೆಯ ಮೊಲೆಯನ್ನು ಸ್ವತಃ ಕಣ್ಣಿನಿಂದ ನೋಡಿಲ್ಲವೆಂತಲೂ, ಆದರೆ ರಾತ್ರಿ ಎಲ್ಲರೂ ಮಲಗಿದ ಮೇಲೆ ಮಗ್ಗುಲಾಗುವಾಗ ಮಾತ್ರ ಆಕೆ ಅವೆರಡರಲ್ಲಿ ಒಂದನ್ನು ನೋವೂ ನೋವು ಎಂದು ಚೀಪಲು ಕೊಡುತ್ತಿರಲಿಲ್ಲವೆಂಬ ಅಂಶವನ್ನು ಬಾಯಿಬಿಟ್ಟ. ನೋಡು ಹೀಗ್ಹೀಗೆ ಎಂದು ಆತನಿಗೆ ಒಪ್ಪಿಸಿದರೂ ಆಕೆಗೆ ಒಪ್ಪಿಸುವಷ್ಟರಲ್ಲಿ ಸಾಕುಸಾಕಾಗಿ ಹೋಯಿತು. ಅದಕ್ಕೆ ದೊಡ್ಡಾಸ್ಪತ್ರೆಗೇ ಹೋಗಬೇಕು, ಅಲ್ಲಿ ಅದನ್ನು ಕತ್ತರಿಸಿ ಅಷ್ಟು ಭಾಗವನ್ನು ತೆಗೆದುಹಾಕುತ್ತಾರೆ, ನೀನು ಹುಷಾರಾಗಿ ಬದುಕಬಹುದು ಎಂದು ಹೇಳಿದರೂ ಅದಕ್ಕೆ ಒದಗಿಬರಬಹುದಾದ ಖರ್ಚನ್ನು ಕೇಳಿ ನೆಲಕ್ಕೇ ಕುಸಿದುಹೋದಳು.

ತಾನು ಯಾವ ಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೋ, ಹುಟ್ಟಿದ ಹತ್ತರಲ್ಲಿ ಯಾವ ಮಗು ಬಯಸಿದಾಗ ಹಾಲು ಕೊಡದ ಪಾಪಿಯೋ ಎಂದೆಲ್ಲ ತನ್ನನ್ನೇ ತಾನೇ ಶಪಿಸಿಕೊಂಡಳು. ಏನು ಹಲುಬಿಕೊಂಡರೇನು, ಸುಂಕದವರ ಮುಂದೆ ಸುಖದುಃಖ ಹೇಳಿಕೊಂಡಂತೆ. ‘ನೀವೇ ಏನಾದರೂ ಮಾಡಿ ವಾಸಿ ಮಾಡಿ ಬುದ್ದೀ, ನಿಮ್ಮ ಕಾಲು ಹಿಡ್ಕತೀನಿ...’ ಎಂದು ಗಂಡ ಹೆಂಡತಿ ಇಬ್ಬರೂ ಕಾಲಿಗೇ ಬಿದ್ದರು. ಆದರೆ ಅದರ ಭಯಂಕರತೆ ಬಗ್ಗೆ ಆತ ಕಲಿತಿದ್ದ ವಿದ್ಯೆಯನ್ನೆಲ್ಲ ಬಳಸಿ ಅವರ ಮನಸ್ಸನ್ನು ಒಂದು ಹಂತಕ್ಕೆ ತರುವ ಹೊತ್ತಿಗೆ ಸಾಕುಸಾಕಾಗಿ ಹೋಗಿತ್ತು. ಮೊಲೆಯೊಳಗೆ ಹೀಗ್ಹೀಗೆ ಒಂದು ಗಡ್ಡೆಯಾಗಿದೆ, ಅದು ಲಕ್ಷಕ್ಕೆ ಒಬ್ಬರಿಗೆ ಬರುತ್ತದೆ, ಅದನ್ನು ಹಾಗೇ ಬಿಟ್ಟರೆ ಅದು ಇಡೀ ದೇಹಕ್ಕೇ ವ್ಯಾಪಿಸಿ ಇಂತಿಷ್ಟು ದಿನದಲ್ಲಿ ಸತ್ತು ಹೋಗುತ್ತಾಳೆ ಎಂದು ಆಕೆಯ ಗಂಡನಲ್ಲಿ ಹೇಳಿದ. ‘ಇರೋ ಎರಡರಲ್ಲಿ ಒಂದು ಮೊಲೆ